ಸಂಬಂಧಗಳ ಸೂಕ್ಷ್ಮ ಎಳೆಗಳನ್ನು ಇದ್ದ ಹಾಗೆಯೇ ಗ್ರಹಿಸಬಲ್ಲ ಇಂದ್ರಕುಮಾರ್ ಎಚ್. ಬಿ. ಅವರು ಮೂಲತಃ ಚಿತ್ರದುರ್ಗದವರು. ವೃತ್ತಿಯಲ್ಲಿ ಶಿಕ್ಷಕರು. 'ನನ್ನ ನಿನ್ನ ನೆಂಟತನ', 'ಪರಮೂ ಪ್ರಪಂಚ', 'ಕಾಣದ ಕಡಲು' ಕಥಾಸಂಕಲನಗಳು. 'ಮೃದುಲಾ' ಮತ್ತು 'ಹುಲಿಕಾನು' ಕಾದಂಬರಿಗಳು. 'ಬಾವಿಗ್ಯಾನವ ಕುರಿತು' ಅವರ ಕವನ ಸಂಕಲನ. ಅವರು ಬರೆದ ಕಥೆ 'ಸೂಜಿದಾರ' ಎಂಬ ಸಿನಿಮಾ ಆಗಿದೆ.

ನೆನಪಿಲ್ಲದಿದ್ದರಿಂದ ನನಗೆ ಮೂರನೆಯ ತರಗತಿಯಿಂದ ಈಚೆಗಿನ ಪಾಠಗಳಷ್ಟೇ ನೆನಪಿರುವುದರಿಂದ, ನನ್ನ ತಿಳುವಳಿಕೆ ನಾನು ಸಣ್ಣಮಗುವಿನಿಂದ ಮಗುವಾಗಿ ದೊಡ್ಡವಳಾಗಿರುವುದು. ಹಾಗಾಗಿ ನನಗೆ ತಿಳುವಳಿಕೆ ಬಂದಾಗಿನಿಂದ ಎಂದು ಹೇಳಬೇಕು ಎಂದು ನಿರ್ಧರಿಸಿಕೊಂಡಿದ್ದಳು. ಬಯಲುಸೀಮೆಯ ವಿಜ್ಞಾನದ ಮೇಷ್ಟ್ರು ಬಂದು ಈವರೆಗೆ ಅಂದುಕೊಂಡ, ನಂಬಿಕೊಂಡ, ಪ್ರಶ್ನಿಸಲಾರದೆ ಒಪ್ಪಿಕೊಂಡ ಎಲ್ಲವನ್ನು ಕೆದಕಲು ಶುರುಮಾಡಿಬಿಟ್ಟಿದ್ದರು. 'ಎಲ್ಲರೂ ಬೆಳಗ್ಗೆ ಏನು ತಿಂದುಬಂದಿರಿ' ಎಂದು ಕೇಳಿದ್ದೇ ತಪ್ಪಾಯಿತೆನ್ನುವಂತೆ ಮಾಡಿಬಿಟ್ಟಿದ್ದರು ಮಕ್ಕಳು. 'ಬೆಳಗಿನ ಚಾ ಕುಡಿಯೂಕೆ' ಎನ್ನುತ್ತ ಕಾಡಿನ ಸಮಗ್ರ ಪ್ರಾಣಿಗಳು ಮಕ್ಕಳ ಬಾಯಲ್ಲಿ ಮತ್ತು ಆ ಎಲ್ಲ ಪ್ರಾಣಿಗಳು ಬೆಳಗ್ಗೆ ಗುಡ್ಡಕ್ಕೆ ಗುಡ್ಡಿಗೆ ಹೋದಾಗ ತಿಪ್ಪೆಯ ಮೇಲೆ ಬೇರೆ ರೂಪದಲ್ಲಿ ಹೊರಬರುವುದನ್ನು ಕಲ್ಪಿಸಿಕೊಂಡು ಮೇಷ್ಟ್ರು ಬೆರಗಾಗಿದ್ದರು. 'ಅಲ್ರೋ ಚಿಪ್ಪುಹಂದಿ ತಿಂದರೆ ದೊಡ್ಡ ಕೇಸು ಹಾಕ್ತಾರೆ...' ಅಂತ ಮೇಷ್ಟ್ರು ಅಂದರೆ, ಉಳಿದ ಮಕ್ಕಳು 'ಅದಕ್ಕೆ ನಾವು ಕಾನ್‌ಹಂದಿ ತಿಂಬೂದು ಅಷ್ಟೇಯಾ...' ಅನ್ನುತ್ತ ಅವರನ್ನು ಬೆಚ್ಚಿಬೀಳಿಸುತ್ತಿದ್ದರು. ಅವರು ಕೇಳುವ ಪ್ರಶ್ನೆಗಳು ಇವಳನ್ನು ಒಮ್ಮೆಲೆ ಪ್ರೇರೇಪಿಸಿ ಮನೆಯಲ್ಲಿ ಆಯಿಯೂ ಅಪ್ಪಯ್ಯನೂ ಖಾಲಿ ಸಿಕ್ಕಿಬಿಟ್ಟರೆ ಇವಳ ಕಾಟಕ್ಕೆ 'ಪ್ರಶ್ನೆಗುಮ್ಮ ಬಂತು' ಅಂತಾ ಹೆದರಿ ಜಾಗ ಖಾಲಿಮಾಡಿಬಿಡುತ್ತಿದ್ದರು. ಮೇಷ್ಟ್ರು ಹೇಳಿದ್ದೆಲ್ಲಾ ಸರಿ ಅನ್ನುವುದನ್ನು ಕಂಡುಕೊಳ್ಳುವ ಹೊಸ ಹಠಕ್ಕೆ ಬಿದ್ದವಳಂತೆ ವಿಜ್ಞಾನ ಪಾಠದ ಎಲ್ಲ ಪ್ರಸಂಗಗಳನ್ನೂ ಒರೆ ಹಚ್ಚಿ ನೋಡತೊಡಗಿದ್ದಳು.

ಈ ಅಜ್ಜ ದಾಟಿಕೊಳ್ಳುವ ಸಣ್ಣ ಪ್ರಸಂಗ ಅವಳಲ್ಲಿ ಒಂದು ಸಣ್ಣ ಕಾಲದ ಹೊರಳುವಿಕೆಯನ್ನು ಸೂಚಿಸುವಂತೆ ಆಗಿ ಹೋಗಿತ್ತು. ಪಾಠದ ಸಂದರ್ಭದಲ್ಲಿ ಯಾವ ಸಮಯದಲ್ಲೋ ಮೇಷ್ಟ್ರು 'ನೀನು ಮನೆಯಿಂದ ಶಾಲೆಗೆ ಬರಲು ಇಂತಿಷ್ಟು ನಿಮಿಷ ಹಿಡಿಯುತ್ತದೆ ಅಂತ ಇಟ್ಟುಕೋ' ಎಂದಿದ್ದರು. ಅಂದಿನಿಂದ ಮನೆಯಿಂದ ಶಾಲೆಗೆ ಇಂತಿಷ್ಟೇ ನಿಮಿಷದಲ್ಲಿ ಬರಬೇಕು. ಅದು ನಿಧಾನವಾಗಲಿ ಬೇಗನೆಯಾಗಲಿ. ಸಮಯ ನಿಖರವಾಗಿರಬೇಕು ಅನ್ನುವುದು ಖಾಯಂ ಆಗಿ ಅವಳ ತಲೆ ಹೊಕ್ಕಿಬಿಟ್ಟಿತು. ಆದರೆ, ತನ್ನದು ನಿತ್ಯ ಬದಲಾಗುತ್ತಿರುತ್ತದೆ... ಒಮ್ಮೆ ಹದಿನೇಳು ನಿಮಿಷಕ್ಕೆ ಮುಟ್ಟಿದರೆ, ಇನ್ನೊಮ್ಮೆ ಇಪ್ಪತ್ತೇಳು ನಿಮಿಷಕ್ಕೆ ಮಿಕ್ಕಿ ಸಮಯವಾಗಿರುತ್ತದೆ. ನನ್ನ ಕಾಲುಗಳು ಸೆಕೆಂಡಿಗೊಂದು ಹೆಜ್ಜೆಯಂತೆ ಎಂದು ನಡೆಯಲು ಶಕ್ತವಾಗುತ್ತವೆ ಆ ಅಜ್ಜನಂತೆ... ಎಂದುಕೊಂಡಿದ್ದಳು. ಅಜ್ಜನ ನಡಿಗೆ, ಉದಯ ಮತ್ತು ಅಸ್ತ ಹೆಚ್ಚುಕಡಿಮೆ ನಿಖರವಾಗಿರುತ್ತಿತ್ತು. ವಸ್ತು ಚಲಿಸಿದ ವೇಗ ಮತ್ತು ತೆಗೆದುಕೊಂಡ ಕಾಲ ಎಂದಾಕ್ಷಣ, ಮೇಷ್ಟ್ರು ಹಳೆಯ ಮರದ ಕಪ್ಪುಹಲಗೆಯ ಮೇಲೆ ಕಾರಿನ ಚಿತ್ರವನ್ನೇ ಬರೆದರೂ ಇವಳ ಕಲ್ಪನೆಯ ಕಣ್ಣಿಗೆ ಅಜ್ಜನನ್ನೇ ಅಲ್ಲಿ ನಿಲ್ಲಿಸಿದಂತಾಗುತ್ತಿತ್ತು. ತನಗೆ ತಿಳಿವಳಿಕೆ ಬಂದಾಗಿನಿಂದ ನೋಡಿದ ಆಕೆಯ ಕಣ್ಣಿಗೆ ಅಜ್ಜ ಬಹಳ ವರ್ಷವಾದರೂ ಹಾಗೇ ಇದ್ದ. ಅಮ್ಮ ವರ್ಷ ವರ್ಷಕ್ಕೆ ಬದಲಾಗುತ್ತಿದ್ದಾಳೆ. ಕಣ್ಣುಗುಡ್ಡೆ ಒಳಕ್ಕೆ ಸರಿಯುತ್ತಿವೆ. ಕೆನ್ನೆಮೂಳೆ ಮೇಲೆ ಬಂದಂತೆನಿಸುತ್ತಿದೆ. ಕೂದಲು ಉದುರಿಉದುರಿ ತಲೆಯ ಬೋಳು ಕಾಣುತ್ತಿದೆ. ಆಕೆಯ ನಡಿಗೆಯೂ ವರ್ಷದಿಂದ ವರ್ಷಕ್ಕೆ ನಿಧಾನವಾಗುತ್ತಿದೆ. ಸಣ್ಣವಳಿದ್ದಾಗ ಆಕೆ ಎರಡು ಕೊಡ ನೀರನ್ನು ನಿರಾಯಾಸ ತರುತ್ತಿದ್ದವಳು. ಈಗ ಒಂದು ಕೊಡವನ್ನು ತುಟಿಕಚ್ಚಿ ನಿಧಾನಕ್ಕೆ ಹೊತ್ತು ತಂದು ದೊಡ್ಡ ಉಸಿರುಬಿಡುತ್ತಾಳೆ. ಆದರೆ, ಈ ಅಜ್ಜ... ನಿಖರ... ಸೂರ್ಯನಂತೆ.

ಅಜ್ಜನ ತಲೆಯಲ್ಲಿ ಅಷ್ಟೇ ಕೂದಲು ಇದ್ದಂತೆ, ಲೆಕ್ಕಕ್ಕೆ ಹೇಳಬೇಕೆಂದರೆ ಅಷ್ಟೇ ಹಣೆಯ ಗೆರೆಗಳು, ಹಾಗೆಯೇ ಅಲೆಯಂತೆ ಬಾಗಿಬಳುಕಿರುತ್ತವೆ... ಹೆಚ್ಚುಅಲ್ಲದ ಕಡಿಮೆ ಅಲ್ಲದ ಸರಿಸಪಾಟು ವೇಗ...

